# ಸರ್ವಜ್ಞನ ವಚನಗಳಲ್ಲಿ ಮಹಿಳಾ ಸಂವೇಧನೆ

♦ ಡಾ.ಎಸ್.ಬಿ. ಚನ್ನಗೌಡ್ರ. ಎಂ.ಎ ಪಿಹೆಚ್.ಡಿ

**ಕನ್ನಡ ಪ್ರಾಧ್ಯಾಪಕರು ಹಾಗೂ ಪಾಚಾರ್ಯರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಸ್ನಾತ್ತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು.**

ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ಶಾಸನಗಳಲ್ಲಿ ಇತರ ಆಕರ ಗ್ರಂಥಗಳಲ್ಲಿ ಮಹಿಳಾ ಸ್ಥಾನ,ಮಾನ ಕುರಿತು ವಿಫುಲವಾದ ಬೆಳೆ ಬೆಳೆದಿರುವುದನ್ನು ಕಾಣುತ್ತೇವೆ. ಸಾಹಿತ್ಯದಲ್ಲಿ ಸ್ತ್ರೀ ಸ್ಥಾನ,ಮಾನ, ಶಾಸನಗಳಲ್ಲಿ ಸ್ತ್ರೀ ಸ್ಥಾನ,ಮಾನ, ದಾನ, ಧರ್ಮಗಳಲ್ಲಿ ಸ್ತ್ರೀ ಸ್ಥಾನ,ಮಾನ, ತ್ಯಾಗ,ಬಲಿದಾನಗಳಲ್ಲಿ ಸ್ತ್ರೀ ಸ್ಥಾನ,ಮಾನ, ಅಷ್ಟೇ ಅಲ್ಲದೇ ರಾಮಾಯಣ, ಮಹಾಭಾರತಗಳಲ್ಲಿ ಸ್ತ್ರೀ ಸ್ಥಾನ,ಮಾನಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮರೆಯಲಾರದಂತಹ ಘಟನೆಗಳಿಗೆ, ಪಾತ್ರಗಳಿಗೆ ಸಾಕ್ಷಿಯಾಗಿರುವುದನ್ನು ನಾವು ಮರೆಯುವಂತಿಲ್ಲ. ಲೌಕಿಕ, ಧಾರ್ಮಿಕ ಕಾವ್ಯ ಮಹಾಕಾವ್ಯಗಳಲ್ಲಿ ಮುಂದೆ ಬಂದ ವಚನ ಸಾಹಿತ್ಯ ಚಳುವಳಿಯಲ್ಲಂತೂ ಮಹಿಳೆಗೆ ನೀಡಿದ ಗೌರವ ವರ್ಣಿಸಲಾಗದು. ಹೆಣ್ಣು ಎಲ್ಲಿ ನೆಲೆಸುತ್ತಾಳೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬಂತೆ ಆಕೆಯ ಘನತೆಯನ್ನು ಕೊಂಡಾಡಿದರೂ ಆಕೆಯ ವಿರೋಧದ ಸಂವೇಧನೆಗಳನ್ನು ಕಾಣುತ್ತೇವೆ. ಇದಕ್ಕೆ ಉದಾಹರಣೆ ಎಂಬಂತೆ ಜನ್ನನ ಕಾವ್ಯದಲ್ಲಿ ಅಮೃತಮತೀಯ ಪಾತ್ರ ಇಡೀ ಹೆಣ್ಣು ಕುಲವೇ ತಲೇ ತಗ್ಗಿಸುವಂತಿದೆ. ಹೀಗೆ ಪ್ರಾಚೀನ ಕಾಲದಿಂದಲೂ ಮಹಿಳಾ ಪರ–ವಿರೋಧದ ಸಂವೇಧನೆಯನ್ನು ಕಾಣುತ್ತಲೇ ಬಂದಿದ್ದೇವೆ.

ಕನ್ನಡ ಸಂಸ್ಕೃತಿ ಪುರುಷ ಪ್ರಧಾನ ಸಂಸ್ಕೃತಿ. ಇಂತಹ ಸಮಾಜದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆಗಳ ಅವಕಾಶವಿಲ್ಲಾ ಸರ್ವಕಾಲಕ್ಕೂ ಪುರುಷನ ಅಧೀನಳಾಗಿ ತನ್ನ ಬದುಕನ್ನು ನಡೆಸಬೇಕೆಂದು ಸಮಾಜ ಬಯಸುತ್ತದೆ. ಇಂತಹ ಪುರುಷಾಧೀನ ಸಂಸ್ಕೃತಿಯಲ್ಲಿ ತನ್ನ ಅಸ್ತಿತ್ವದ ನೆಲೆ ಕಂಡುಕೊಳ್ಳದೆ ಬದುಕು ಸಾಗಿಸಬೇಕಾದ ಅನಿವಾರ್ಯತೆ ಹೆಣ್ಣಿನದು. ಪ್ರಾಚೀನ ಕಾಲದಿಂದಲೂ ಹೆಣ್ಣಿಗೆ ಸಮಾನತೆ, ಗೌರವ ಕೊಡಬೇಕೆಂಬ ದಟ್ಟ ದೋರಣೆಗಳಿದ್ದರೂ ಅಂದಿನಿಂದ ಇಲ್ಲಿಯವರೆಗೆ ಸ್ತ್ರೀ ಸಮಾನತೆಗಳನ್ನು ಈ ಸಮಾಜದಲ್ಲಿ ನಾವು ಗಮನಿಸಿದಾಗ ಸತ್ಯ ಗೊತ್ತಾಗಬಹುದು. ಇಂತಹ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರನ್ನು ಕುರಿತ ಸಂವೇಧನೆಗಳು, ಚಿಂತನೆಗಳು ಯಾವ ರೀತಿಯಲ್ಲಿರಬಹುದು ಎಂಬುದು ಕುತೂಹಲದ ಸಂಗತಿಯೇನಾಗಿ ಉಳಿದಿಲ್ಲಾ.

ಇಂತಹ ಸಮಾಜದ ದೃಷ್ಟಿಕೋನವನ್ನೇ ಇಟ್ಟುಕೊಂಡೆ ಬಂದಿರುವ ಮಹಾಕವಿ ಸರ್ವಜ್ಞನಿಗೂ ಈ ಮಾತುಗಳು ಅನ್ವಯಿಸುತ್ತವೆ. ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸರ್ವಜ್ಞನದು ಜನಪ್ರಿಯ ಹೆಸರು. ಪ್ರಾಚೀನ ಕಾಲದ ಪಂಪ, ರನ್ನ, ಜನ್ನ ಮಧ್ಯಕಾಲೀನ ಕನ್ನಡದ ಹರಿಹರ, ಕುಮಾರವ್ಯಾಸ, ರಾಘವಾಂಕ ನಭೋಮಂಡಲದ ನಕ್ಷತ್ರಗಳಂತಿದ್ದರೆ ಸರ್ವಜ್ಞ ದೃವ ತಾರೆಯಂತೆ ಮಿನುಗಿದವನು. ಕಂಡದ್ದನ್ನು ಕಂಡ ಹಾಗೆ ಉದ್ಧರಿಸುವ ಬಂಡಾಯ ಮನೋಧರ್ಮದ ಸರ್ವಜ್ಞ, ಸ್ತ್ರೀ ಪರ ಗ್ರಹಿಕೆಯ ಪರ,ವಿರೋಧ ಸಂವೇಧನೆಗಳಲ್ಲಿ ಸ್ತ್ರೀಯನ್ನು ಸರ್ವಜ್ಞ ಕಂಡ ರೀತಿ ವಿಶೇಷವೇ ಆಗಿದೆ. ಮೊದಲು ಸ್ತ್ರೀ ವಿರೋಧವಾದ ನೆಲೆಗಳನ್ನು ಇಟ್ಟುಕೊಂಡು ಸರ್ವಜ್ಞನಿಂದ ರಚಿತವಾದ ತ್ರಿಪದಿಗಳಲ್ಲಿ ಸ್ತ್ರೀಯನ್ನು ಬಹಳಷ್ಟು ತುಚ್ಚ ಮಟ್ಟದಲ್ಲಿ ಗ್ರಹಿಸಿದ ಕಾರಣ ತನ್ನ ತಾಯಿಯಿಂದಾದ ನೋವು, ಸಂಕಟ ಇವೆಲ್ಲವುಗಳನ್ನು ತಾಳಲಾರದೆ ಸಮಾಜದ ಸ್ತ್ರೀಯರನ್ನು ಕುರಿತು ಈ ರೀತಿ ಆಡಿರಬಹುದೇ? ಎಂಬ ಪ್ರಶ್ನೆ ನಮ್ಮನ್ನ ಕಾಡುತ್ತಿದೆ. ಸರ್ವಜ್ಞನ ಒಟ್ಟು ತ್ರಿಪದಿಗಳಲ್ಲಿ ಸ್ತ್ರೀಯರನ್ನು ಕುರಿತಾದ ಅವನ ಗ್ರಹಿಕೆಗಳು, ನಿಲುವುಗಳು ಹಾಗೂ ಸಂವೇಧನಗಳನ್ನು ಗಮನಿಸಿದಾಗ ಅತೀವ ನಿರಾಶೆ ಉಂಟಾಗುತ್ತದೆ. ಸಮಾಜದ ಸ್ತ್ರೀಯರನ್ನು ಕುರಿತ ಅವನ ಪೂರ್ವಗ್ರಹ ಪೀಡಿತ ವಿರೋಧದ ನಿಲುವು ಅವನ ತ್ರಿಪದಿಗಳಲ್ಲಿ ಅಭಿವ್ಯಕ್ತಗೊಂಡದ್ದನ್ನು ನೋಡಬಹುದು. ಸಾಂಪ್ರದಾಯಿಕವಾದ ಪುರಾತನವಾದ ಅವನ ಗ್ರಹಿಕೆ ನಿಲುವುಗಳಲ್ಲಿ ಉನ್ನತ ಸ್ಥಾನದ ಪರಿಕಲ್ಪನೆ ಇದೆ. ಆದರೆ ಸರ್ವಜ್ಞ ಸ್ತ್ರೀಯನ್ನು ಅಷ್ಟೊಂದು ಗೌರವಯುತವಾಗಿ ನಡೆಸಿಕೊಂಡಿದ್ದು ಕಂಡರೂ ಅತ್ಯಂತ ಕಡಿಮೆ. ಹೆಣ್ಣಿನ ಸೂಳೆತನ, ಜಾರತನ, ಆಕೆಯ ಚಂಚಲ ಮನಸ್ಸು, ಆ ಚಂಚಲ ಮನಸ್ಸಿನ ಆಶೆಗಳು ಹಾಗೂ ಆಕೆಯ ಸಹವಾಸ ಸಲ್ಲ ಎಂಬ ಮಾತುಗಳು ಸ್ತ್ರೀ ಸಹವಾಸವೇ ಬೇಡ ಎಂಬ ಧೋರಣೆಯನ್ನು ಎತ್ತಿ ತೋರಿಸುತ್ತವೆ.

ಕುರುಬಂಗೆ ಕುರಿಯಾಸೆ । ಮರಿಗಳಿಗೆ ಮೊಲೆಯಾಸೆ ।
ಸರುವರಿಗೆ ಮಳೆಯು ಬರುವಾಸೆ, ಸೂಳೆಗೆ ।
ಬೆರೆದಾಟದಾಸೆ ಸರ್ವಜ್ಞ

ಒಕ್ಕಲಿಗೆ ಊರಾಸೆ । ಮಕ್ಕಳಿಗೆ ಮನೆಯಾಸೆ ।
ಜಕ್ಕವಕ್ಕಿಗೆ ಕೊಳದಾಸೆ, ಸೂಳೆಗೆ ।
ರೊಕ್ಕದ ಆಸೆ ಸರ್ವಜ್ಞ

ಹದ್ದು ಹಾವನುನುಂಗು । ಮದ್ದು ಕುತ್ತವ ನುಂಗು ।
ನಿದ್ದೆಗೈಯುವನ ಮೃತಿ ನುಂಗು, ಸೂಳೆ ತಾ ।
ಹೊದ್ದಿದರ ನುಂಗು ಸರ್ವಜ್ಞ

ಸರ್ವಜ್ಞನ ಈ ತ್ರಿಪದಿಗಳಲ್ಲಿ ವೇಶ್ಯೆತನದ ಹೆಣ್ಣನ್ನು ಎಷ್ಟು ನಿಕೃಷ್ಟವಾಗಿ ಕಂಡ ಪರಿ ಹೆಣ್ಣಿನ ಜಾರತನ, ಆಕೆಯ ಸೂಳೆತನ ಹಾಗೂ ಆಕೆಯ ಅತೀ ಆಸೆ ಕುರಿತು ಸರ್ವಜ್ಞನ ಚಿಂತನೆ ಹೆಣ್ಣನ್ನು ಎಷ್ಟು ಕೀಳಾಗಿ ಕಂಡಿರಬಹುದು, ಅವನ ತ್ರಿಪದಿಗಳಲ್ಲಿ ಈ ರೀತಿ ಅತೀರೇಕವನ್ನು ಅವನ ತ್ರಿಪದಿಗಳು ನೇರವಾಗಿ, ಗಾಢವಾಗಿ ಅಭಿವ್ಯಕ್ತ ಪಡಿಸುತ್ತವೆ. ತನ್ನನ್ನು ಹಡೆದ ತಾಯಿಯನ್ನೇ ನಿರಾಕರಿಸುವ ಅವನ ತ್ರಿಪದಿ ತಾ, ಯೆಂಬೆನಲ್ಲದೆ । ತಾಯಿ ನಾನೆಂಬೆನೆ? । ತಾಯಿಯೆಂದಾನು ನುಡಿದೇನು ಪರಸ್ತ್ರೀಯ । ತಾಯಿಯೆಂದೆಂಬೆ ಸರ್ವಜ್ಞ ॥೧೫॥ ತಾಯಿಯನ್ನೇ ನಿರಾಕರಿಸುವ ಆತನ ಈ ತ್ರಿಪದಿಯನ್ನು ಗಮನಿಸಿದಾಗ ಮೂಲವಾಗಿ ಹೆಣ್ಣನ್ನೇ ನಿರಾಕರಿಸುವ ಮನಸ್ಥಿತಿಯನ್ನೇ ತೋರುತ್ತಾನೆ. ಸೂಳೆಯ ಮಗನಾದರೂ ತಾಯಿ ಪ್ರೀತಿಯನ್ನು ತೋರುತ್ತಾನೆ ಆದರೆ ಸರ್ವಜ್ಞ ತಾಯ್ತನವನ್ನೇ ನಿರಾಕರಿಸುವ ಅವನ ಧೋರಣೆ ಅವನ ಗ್ರಹಿಕೆ ಸ್ತ್ರೀ ಸಮುದಾಯ ಕುರಿತ ಅವನ ಖಂಡನೆಗೆ ಮತ್ತೊಂದು ಗಟ್ಟಿ ಕಾರಣಗಳಿಲ್ಲವೇ ಎನಿಸುತ್ತದೆ.

ಸ್ತ್ರೀಯರನ್ನು ಕುರಿತ ಮಾತೃ ಮೂಲದ ಆದರ್ಶ ಮತ್ತು ದೈವಿಕ ನೆಲೆಗಳತ್ತ ಕಣ್ಣು ಹಾಯಿಸಲು ಹೋಗದ ಸರ್ವಜ್ಞನಿಗೆ, ಸಾಧಕರಿಗೆ ಕಂಡ ಹಾಗೆ ಹೆಣ್ಣು 'ಮಾಯೆ'ಯ ರೂಪದಲ್ಲಿ ಗೋಚರಿಸಿದ್ದಾಳೆ.

ವರತಪಸಿ ಸನ್ಯಾಸಿ । ಪರಮಯೋಗಿಯು ಮುನಿಯು ।
ಸೆರೆಸಿಕ್ಕು ಮಾಯೆಗೊಳಗಾಗಿ ಇರುತಿರಲು ।
ಪರರ ಪಾಡೇನು ? ಸರ್ವಜ್ಞ

ರುದ್ರಕರ್ತನು ತಾನು । ಅರ್ಧನಾರಿಯೂ ಆದ ।
ಇದ್ದವರೊಳಾರು ಸತಿಯರ ಹೃದಯವನು ।
ಗೆದ್ದವರು ಯಾರು ಸರ್ವಜ್ಞ

ಈ ಗ್ರಹಿಕೆಯನ್ನಾದರಿಸಿಯೇ ಹೆಣ್ಣು, ಹೊನ್ನು, ಮಣ್ಣಿನ ಬಲೆಯೊಳಗೆ ಹಿಡಿದು ಆಡಿಸುತ್ತಿರುವ 'ಮುಕ್ಕಣ್ಣನ ಲೀಲೆ' ಯಾಗಿಯೇ ಗ್ರಹಿಸುತ್ತಾನೆ.

ವಿರಕ್ತನಾದ ಸರ್ವಜ್ಞ ಸ್ತ್ರೀ ಜೀವನವನ್ನು ಕುರಿತು ಬರೆಯಲು ಅವನಿಗೆ ಅರ್ಹತೆ ಇದೆಯೇ ಎಂದು ಯಾರಾದರು ಪ್ರಶ್ನಿಸುವುದು ಸಹಜವೇ. ಯಾಕೆಂದರೆ ತಾನೇ ಕಣ್ಣಾರೆ ಕಂಡ ಇತರರಿಂದ ಕಿವಿಯಾರೆ ಕೇಳಿದ ಸಂಗತಿಗಳೇ ಸ್ತ್ರೀ ಪರವಾದ ಕವಿತೆಗಳಿಗೆ ಆಧಾರ ಎನ್ನಬಹುದು. ಜಾರಜಾರೆಯರ, ವೈಶ್ಯೆಯರ ಚೇಷ್ಟೆಗಳು ಅವುಗಳಿಂದ ಸಮಾಜದ ಮೇಲಾಗುವ ಪರಿಣಾಮಗಳು ಇಂತಹಾ ಎಷ್ಟೋ ವಿಷಯಗಳು ನಿರೂಪಣೆಯಾಗಿರುವುದನ್ನು ಕಂಡಾಗ ಸರ್ವಜ್ಞನ ಸ್ತ್ರೀ ಸ್ವಭಾವ ರಹಸ್ಯ ಜ್ಞಾನದ ಅರಿವು ಆಗದೇ ಇರದು. ಆತ ತನ್ನ ವಚನಗಳಲ್ಲಿ ಭೀಭತ್ಸವಾದ ವ್ಯಭಿಚಾರವನ್ನು, ಅನಾಚಾರವನ್ನು ವರ್ಣಿಸಿ ಜನರಲ್ಲಿ ಹೆಣ್ಣಿನ ಬಗ್ಗೆ ಜಿಗುಪ್ಸೆಯುಂಟು

ಮಾಡಿ ಕಾಮವಿಮುಕರನ್ನಾಗಿ ಮಾಡುವುದೇ ಅವನ ಧ್ಯೇಯವಾಗಿತ್ತೇ? ಎಂಬ ಪ್ರಶ್ನೆ ಓದುಗನಲ್ಲಿ ಏಳುತ್ತದೆ. ಆದರೂ ತನ್ನದೊಂದು ವಚನದಲ್ಲಿ ಬಡವನ ಹೆಂಡತಿ ಕಡು ಚಲುವೆಯಾಗಿರುವುದು ಎಲ್ಲರ ಕಣ್ಣು ಅವಳ ಮೇಲೆ ಎಂಬಂತೆ ಹೆಣ್ಣಿನ ಸೌಂದರ್ಯವನ್ನು ಎತ್ತಿ ತೋರಿಸಿ, ನಡುಬೀದಿಯಲಿ ಧವನವನು ಬಿತ್ತಲು ಮುಡಿಯದವರಾರು ಎಂಬ ದೃಷ್ಟಾಂತದಿಂದ ಹೆಣ್ಣಿನ ಬಗ್ಗೆ ಆಸೆ ಹುಟ್ಟಿಸದೇ ಇರುವುದನ್ನು ಮರೆತಿಲ್ಲಾ. ಮೂರುಹೊತ್ತು ಲೋಟಗುಡುವ ಹೆಂಡತಿಗಿಂತ, ಉರಿದೇಳುವ ಕಿಚ್ಚು ಮೇಲಂತೆ. 'ಮೇಡಿನಾ ಹೋಲ ಜೋಡಿಲ್ಲದೆತ್ತು ಹಾಗೂ ಕಾಡಿಗೆಯ ಕಣ್ಣ ಸೊಸೆ' ಈ ಮೂರರಿಂದ ಕೇಡು ತಪ್ಪುವುದಿಲ್ಲಾ. ನಾಯಿಯ ಬಾಲವನ್ನು ನೆಚ್ಚಿ ಹಳ್ಳವನ್ನಂತು ಹಾಯಲು ಸಾಧ್ಯವಿಲ್ಲವೋ ಹಾಗೇಯೆ ನಾಯಿಯ ಚಾಪಲ್ಯವನ್ನು ಹೊಂದಿರುವ ಹೆಣ್ಣನ್ನು ನಂಬಲಾಗದು. ಸ್ತ್ರೀಯನ್ನು ನಾವು ಯಾವಾಗ ನಂಬಬೇಕೆಂದರೆ ತಗುಣಿ ಹೆಬ್ಬುಲಿಯನ್ನು ಹಿಡಿದಾಗ, ಏತದ ಅಗುಣಿ ಚಿಗಿತು ಕಾತು ಫಲವಾದಾಗ, ಮರುಳಿನಲ್ಲಿ ಕಮಲ ಬೆಳೆದಾಗ, ನಂಬಬಹುದಂತೆ. ಈ ಮೂರು ದೃಷ್ಟಾಂತಗಳು ಸರ್ವಜ್ಞನ ವಚನಗಳಲ್ಲಿ ಸ್ತ್ರೀ ಗುಣಗಳನ್ನು ಅಳೆದು ನೋಡುವ ಪರಿ ಸ್ತ್ರೀ ನಂಬಿಕೆಗೆ ಅರ್ಹಳಲ್ಲವೇ? ಎಂಬದೊಂದು ಸಂಶಯ ನಮ್ಮನ್ನು ಕಾಡದೇ ಇರಲಾರದು. ಸರ್ವಜ್ಞ ಹೆಣ್ಣನ್ನು ಕುರಿತು ಇವನಾಡಿದ ಮಾತುಗಳು ಪ್ರಕೃತಿಯಲ್ಲಿ ಸಂಭವಿಸಲು ಸಾಧ್ಯವೇ, ಹೆಣ್ಣು ಮತ್ತು ಹೆಂಡಿರ ಮಾತುಗಳನ್ನು ನಂಬಲು ಅವಕಾಶವೇ ಇಲ್ಲಾ, ಆದರೂ ಅವಳೊಂದಿಗೆ ಹೇಗಿರಬೇಕು ಎಂಬುದನ್ನು ಕವಿ ಸರ್ವಜ್ಞ 'ನಂಬಿದಂತಿರಬೇಕು । ನಂಬದಲೇ ಇರಬೇಕು । ಇಂಬರಿದು ಎಚ್ಚರಿರಬೇಕು ಹೆಣ್ಣನ್ನು । ನಂಬಿದವ ಕೆಟ್ಟ' ॥೧೬೩೦॥ ಬಹುಶಃ ಪ್ರಾಣ ತೆಗೆಯಲು ಬಂದ ಶತ್ರುವನ್ನು ಇಷ್ಟು ಅನುಮಾನದಿಂದ ನೋಡಲು ಸಾಧ್ಯವಿಲ್ಲವೇನೋ ಎಂಬ ಅನುಮಾನದ ಎಳೆ ಹೆಣ್ಣನ್ನ ಕುರಿತಂತೆ ಸರ್ವಜ್ಞನಿಗಿದೆ. ಇಂತಹಾ ಅಖಂಡ, ಅಪನಂಬಿಕೆಯ ದೃಷ್ಟಿಕೋನಗಳನ್ನಿಟ್ಟುಕೊಂಡೇ ಆಕೆಯ ಗುಣ, ಶೀಲಗಳನ್ನು, ಚಾರಿತ್ರ್ಯವನ್ನು ಅಳೆಯಲು ಹೋರಟಿದ್ದಾನೆ. ಅವನ ಪ್ರಕಾರ ಹೆಣ್ಣು ಸೆರಗ ಬಿಡುವವಳು, ವನಪು ಮಾಡುವವಳು, ಓರೆದುರುಬುಕ್ಕಿ ನಡೆವವಳು, ಉಂಡು ಮಲಗುವವಳು, ಎನ್ನುವಂತಹ ಭಾವನೆ ಮೂಡಿಬರುತ್ತದೆ.

ಸ್ತ್ರೀಯನ್ನು ಕೇವಲ ಭೋಗದ ವಸ್ತುವಾಗಿ ಕಾಮದ ದೃಷ್ಟಿಯಿಂದ ಹೆಣ್ಣೇ ಪ್ರಧಾನಳು ಎಂಬ ಅವನ ಗ್ರಹಿಕೆ ಹೆಣ್ಣನ್ನು ಕಾಮದ ನೆಲೆಯಲ್ಲಿಯೇ ಗ್ರಹಿಸುತ್ತಾನೆ. ಉಚ್ಚೆಯ ಬಚ್ಚಲವ । ತುಚ್ಛವೆಂದೆನಬೇಡ । ಅಚ್ಯುತ ಬಿದ್ದ ನಜಬಿದ್ದ, ದೇವೇಂದ್ರ । ನೆಚ್ಚತ್ತು ಬಿದ್ದ ಸರ್ವಜ್ಞ ॥೧೬೪೯॥ ಈ ರೀತಿ ಆಕೆಯನ್ನು ತುಚ್ಛವಾಗಿ ಕಂಡ ಪರಿ ಸ್ತ್ರೀಯ ಅಸ್ತಿತ್ವವಿರುವುದು ಅದರೊಂದರಲ್ಲೇ ಎಂಬುದನ್ನು ಚಿರಸ್ಥಾಯಿಸಿ ವಿರಮಿಸುತ್ತಾನೆ. ಇಲ್ಲಿ ಪುರುಷನ ಸ್ವಾರ್ಥ ಮತ್ತು ಅವನ ಸುಖಗಳನ್ನು ಹೊರಗೆ ನಿಂತು ಪರಿಭಾವಿಸುತ್ತಾನೆ. ಅವನ ಹೇಳಿಕೆಯಂತೆ ಸೂಳೆಗೆ ಸತ್ಯವಿಲ್ಲಾ, ಕುಲಾ ಶೀಲವಿಲ್ಲ, ವ್ರತವೆಂಬುದಿಲ್ಲಾ, ಹಕ್ಕಿಯಾ ಸೂಳೆ, ಕುದುರೆಯಾ ಸೂಳೆ, ಸೋನನಾ ಸೂಳೆ, ಕೀಡೆಯಾ ಸೂಳೆ, ಹೀಗೆ ಪ್ರಾಣಿ, ಪಕ್ಷಿ, ಕೀಟಗಳನ್ನು ಸೂಳೆಯೊಡನೆ ಸಮೀಕರಿಸುತ್ತಾನೆ. ಹೀಗೆ ಹೆಣ್ಣಿನ ಮನಸ್ಥಿತಿಯನ್ನು ಸರ್ವಜ್ಞನ ಸಂವೇಧನೆಗಳಲ್ಲಿ ಕಾಣುತ್ತೇವೆ.

ಕನ್ನಡ ಕಾವ್ಯಗಳಲ್ಲಿ ಗಂಡು, ಹೆಣ್ಣಿನ ಸಂಗಮ, ಸಹವಾಸ, ಸಂಬಂಧ, ಅನ್ಯೋನ್ಯತೆ, ಪ್ರೀತಿ, ಪ್ರೇಮಾ, ಮಧುರತೆ, ಪ್ರಣಯ, ತ್ಯಾಗ ಎಲ್ಲದನ್ನೂ ಕಾಣುತ್ತೇವೆ. ಸರ್ವಜ್ಞನ ವಚನಗಳಲ್ಲಿ ಸ್ತ್ರೀ ಪರವಾದ ಸಂವೇಧನೆಗಳು ಗಟ್ಟಿಯಾಗಿರುವುದನ್ನು ಸಂಸಾರವೆಂದ ಕೂಡಲೇ ಗಂಡು, ಹೆಣ್ಣಿನ ಸಂಬಂಧ ಒಂದಾಗುತ್ತದೆ, ಇವರಿರ್ವರ ಬಾಳು ಸಮ್ಮಿಲನವಾಗುತ್ತದೆ. ಇದು ಸ್ತ್ರೀಯ ಇನ್ನೊಂದು ಮುಖ, ಮನಬಂದ ಹೆಣ್ಣನ್ನು । ವಿನಯದಲಿ ಕರೆದಿತ್ತು । ಮನಮುಟ್ಟಿ ಬಾಳ್ವೆ ಮಾಡಿದರೆ ಅಮೃತದ । ಕೆನೆಯ ಸವಿದಂತೆ ಸರ್ವಜ್ಞ ॥೧೯೯॥ ತೋಟದ ಕಬ್ಬಿಂದ । ಹೋಟೆಯ ಜೇನಿಂದ । ನೀಟಾಗಿ ಕರೆವ ಹಯನಿಂದ ಬಲ್ಲವಳ । ಕೂಟವೇ ಲೇಸು ಸರ್ವಜ್ಞ ॥೧೨೦೦॥ ಹೆಣ್ಣೆಂದರೆ ಸೃಷ್ಟಿಯ ಪ್ರಗತಿ. ಹೆಣ್ಣಿಂದಲೇ ಜನ್ಮ ಪಡೆದ ಯಾವ ಗಂಡಸು ತಾನೇ ಸ್ತ್ರೀಯನ್ನು ಜರಿದು ಮಾತೃದ್ರೋಹಿಯಾದಾನು, ಸ್ತ್ರೀ ಮಾಯೆಯೆನ್ನುವುದಾದರೆ ಆ ಮಾಯೆಯ ಸಂತಾನವೇ ನಮ್ಮ ಸಾದು-ಸಂತರ, ಋಷಿ-ಮುನಿಗಳ, ಲೋಕನಾಯಕರ, ವಿಶ್ವಮಾನವರ, ಹಿಂಡಲ್ಲವೇ ಆದ್ದರಿಂದ ಹೆಣ್ಣು ಬರಿ ಭೋಗವಸ್ತುವಲ್ಲಾ ಮಹಾ ಮಾತೃಸ್ವರೂಪಿಣಿ, ಪುರುಷನ ಅರ್ಧಾಂಗಿ ಅವಳಿಂದಲೇ ಪುರುಷನಿಗೆ ಮುಕ್ತಿ. ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವು, ಹೆಣ್ಣಿನಿಂದಲೇ ಸಕಲ ಸಂಪದವು, ಹೆಣ್ಣೊಲ್ಲದ ಅಣ್ಣಗಳು ಯಾರು ಸರ್ವಜ್ಞ, ಹೆಣ್ಣಿನಿಂದಲೇ ಇಹ,ಪರಗಳೆರಡು, ಹೆಣ್ಣಿನಿಂದಲೇ ಬಾಳು ಬಂಗಾರವಾಗುತ್ತದೆ, ಅವಳಿಲ್ಲದಿದ್ದರೆ ಅಂಗಾರವಾಗುತ್ತದೆ.

ಬೆಚ್ಚನ ಮನೆಯಾಗಿ । ವೆಚ್ಚಕ್ಕೆ ಹೊನ್ನಾಗಿ ।
ಇಚ್ಚೆಯನು ಅರಿವ ಸತಿಯಾಗಿ, ಸ್ವರ್ಗಕ್ಕೆ ।
ಕಿಚ್ಚು ಹಚ್ಚೆಂದ ! ಸರ್ವಜ್ಞ

ಎತ್ತುಗಳು ಎರಡಾಗಿ । ಬತ್ತದಿಹ ಹಯನಾಗಿ ।
ಪುತ್ರರಯ್ದಾಗಿ ಸತಿಯೊಬ್ಬಳಾದರೆ ।
ನಿತ್ಯದಿ ಸುಖವು ಸರ್ವಜ್ಞ

ಬೆಚ್ಚನೆಯ ಮನೆ, ಸಮರಸವುಳ್ಳ ಸಂಸಾರ, ಕುಟುಂಬಕ್ಕೆ ನೆಮ್ಮದಿ ಶಾಂತಿಯನ್ನು ತರುತ್ತದೆ. ಸಂಸಾರದ ಸಾರ್ಥಕತೆ ಎಷ್ಟು ಆಧಿಕ್ಯವೆನಿಸುತ್ತದೆಂದರೆ ಸರ್ವ ಸುಖವುಳ್ಳ ಸ್ವರ್ಗಕ್ಕೂ ಕಿಚ್ಚು ಹಚ್ಚಿದಂತೆ. ಹಾಗೇಯೆ ಗಂಡು ಹೆಣ್ಣುಗಳೀರ್ವರೂ ಜೋಡಿಯಾಗಿ ನಿರಂತರ ಹಾಲನ್ನು ಕೊಡುವ ಹಸುವಿನಂತೆ ಅದರೊಂದಿಗೆ ಸಂತಾನ ಪ್ರಾಪ್ತಿಯಾದರೆ ಸಂಸಾರ ಪೂರ್ಣವಾಗುತ್ತದೆ. ಅದಕ್ಕಿಂತ ಬೇರೆ ಸ್ವರ್ಗವಿಲ್ಲಾ ಎಂಬ ಇಹಪರದ ಗಾಢಾಂದತೆಯನ್ನು ಸರ್ವಜ್ಞ ಮಾನವ ಜೀವನದ ಸುಮಧುರ ಪರಿಕಲ್ಪನೆಯನ್ನು ನಾವು ಬದುಕಿದರೆ ಇಹಲೋಕದಲ್ಲಿಯೇ ಬದುಕಬೇಕು ಎಂಬ ಅವನ ವಿಶ್ವಮಾನವ ದೃಷ್ಟಿ ಅತ್ಯಂತ ಮಾನವ ಸಾರ್ಥಕತೆಯನ್ನು ಬಿಂಬಿಸುತ್ತದೆ.

ದಂಡಿಗಿಲ್ಲದ ಹಾಡು । ಉಂಡಿಗಿಲ್ಲದ ಸುಂಕ ।
ಹೆಂಡರಿಲ್ಲದನ ಮನೆವಾರ್ತೆ, ತಲೆ ಹೋದ ।
ಮುಂಡದಂತಿಕ್ಕು ಸರ್ವಜ್ಞ

ಲಿಂಗವಿಲ್ಲದ ಪೂಜೆ । ಗಂಗೆಯಿಲ್ಲದ ತೋಟ ।
ಹೆಂಗಳಿಲ್ಲದನ ಮನೆವಾರ್ತೆ, ಅನುದಿನವು ।
ಭಂಗ ಕಾಣಯ್ಯ ಸರ್ವಜ್ಞ

ಪಿಂಡವಿಲ್ಲದ ಶ್ರಾದ್ದ । ಮುಂಡವಿಲ್ಲದ ದೇಹ ।
ಹೆಂಡರಿಲ್ಲದನ ಮನೆವಾರ್ತೆ, ಆವಗಂ ।
ಬಂಡು ಕಾಣಯ್ಯ ! ಸರ್ವಜ್ಞ

ಬದುಕಿನಲ್ಲಿ ಹೆಣ್ಣಿನ ಮಹಿಮೆಯನ್ನು ಸಾರಿದ ಸರ್ವಜ್ಞ ಕೆಲವು ದೃಷ್ಟಾಂತ ಉಪಮೆಗಳಿಂದ ಹೆಣ್ಣಿನ ಹಿರಿಮೆಯನ್ನು ತನ್ನ ವಚನಗಳಲ್ಲಿ ಸಾರಿ, ಸಾರಿ ಹೇಳಿದ್ದಾನೆ. ಆಕೆ ಇಲ್ಲದ ಮನೆ ತಲೆಹೋದ ದೇಹದಂತೆ, ಲಿಂಗವಿಲ್ಲದ ಪೂಜೆಯಂತೆ, ನೀರಿಲ್ಲದ ತೋಟದಂತೆ, ಪಿಂಡವಿಲ್ಲದ ಶ್ರಾದ್ದದಂತೆ ಭಂಗವಾಗುತ್ತದೆ. ಸಂಸಾರ ಸಾಗರದಲ್ಲಿ ಸ್ತ್ರೀಗಿರುವ ಮಾನ್ಯತೆಯನ್ನು ಅವಳ ಸಾಮಿಪ್ಯವನ್ನು ಅವನ ವಚನಗಳಲ್ಲಿ ಪಡೆಮೂಡಿಸಿದ್ದಾನೆ. ಹೆಣ್ಣಿನಿಂದಲೇ ಸರ್ವ ಸಂಪದವು, ಹೆಣ್ಣಿಲ್ಲದ ಬಾಳು ಶೂನ್ಯ. ಎಂಬ ಸ್ತ್ರೀಗಿರುವ ಗೌರವ, ಸ್ಥಾನ,ಮಾನವನ್ನು ಎತ್ತಿ ಹಿಡಿದಿದ್ದಾನೆ.

ಮಗಳಕ್ಕ ತಂಗಿಯು । ಮೀಗೆ ಸೊಸೆಯು ನಾದಿನಿಯು ।
ಜಗದ ವನಿತೆಯರು, ಜನನಿಯು ಇವರೊಳಗೆ ।
ಜಗಕೊಬ್ಬಳೈಸೆ ಸರ್ವಜ್ಞ

ಸಂಚಿ ಇಲ್ಲದ ವೀಳ್ಯೆ । ಮಂಚವಿಲ್ಲದಾ ನಿದ್ಯೆ ।
ಸಂಚವಿಲ್ಲದವಳ ಮನೆವಾರ್ತೆ–ಒಡೆದ ಹಳೆ
ಹಂಚಿನಂತಿತ್ತು ಸರ್ವಜ್ಞ (ಡಾ.ಎಲ್.ಬಸವರಾಜ. ಸರ್ವಜ್ಞನ ವಚನಗಳು)

ಅಲ್ಲವಿಲ್ಲದಾ ಊಟ । ನಲ್ಲಳಿಲ್ಲದಾ ನಿದ್ರೆ ।

ಬಲ್ಲತನವಿಲ್ಲದವಳ ಮನೆವಾರ್ತೆ–ಸಮರದಲಿ
ಬಿಲ್ಲು ಮುರಿದಂತೆ ಸರ್ವಜ್ಞ (ಡಾ.ಎಲ್.ಬಸವರಾಜ. ಸರ್ವಜ್ಞನ ವಚನಗಳು)

ಸ್ತ್ರೀ ಸರ್ವವ್ಯಾಪಿ ಸರ್ವಜ್ಞನ ನೆಲೆಯಲ್ಲಿ ಹೆಣ್ಣು ತಾಯಿಯಾಗಿ, ಅಕ್ಕನಾಗಿ, ತಂಗಿಯಾಗಿ, ಸೊಸೆ, ನಾದಿನಿಯಾಗಿ ಮಿಕ್ಕ ಜಗದ ವನಿತೆಯರಾಗಿ ತನ್ನ ವ್ಯಾಪಕತೆಯನ್ನು ಮೆರೆದಿದ್ದಾಳೆ. ಹೆಣ್ಣಿಲ್ಲದಾ ಬದುಕು ಅಪೂರ್ಣ, ಹಾಗೇಯೆ ಆಕೆಯ ಒಡನಾಟ, ಆಕೆಯ ಸಹವಾಸವಿಲ್ಲದ ಬದುಕು ವ್ಯರ್ಥವೆಂಬುದನ್ನು ಹಾಗೂ ಸಮರದಲ್ಲಿ ಬಿಲ್ಲು ಮುರಿದುಕೊಂಡಂತೆ ಎಂಬ ಸ್ತ್ರೀಯ ಸದ್ಗುಣಗಳನ್ನು ವೈವಿಧ್ಯಮಯವಾಗಿ ನಿರೂಪಿಸುತ್ತಾನೆ ಇಂತಹ ಸದ್ಗುಣಗಳ ಸ್ತ್ರೀ ಪುರುಷನ ಬದುಕಿಗೆ ಎಷ್ಟು ಅವಶ್ಯಕಳಾಗಿದ್ದಾಳೆ ಎಂಬುದನ್ನು ವಚನಗಳಲ್ಲಿ ನಿರೂಪಿಸುತ್ತಾನೆ.

ಊರಿದ ಚೇಳಿನಿಂ । ದೇರಿದ ಬೇನೆಯಲಿ । ಮೂರು ಜಗವೆಲ್ಲ ಹೊರಳುತಿಹುದಾ ನೋವ । ಮೀರಿದವರಿಲ್ಲ ! ಸರ್ವಜ್ಞ ॥೧೬೨೩॥ ಒಂದು ದೃಷ್ಟಿಯಿಂದ ಸ್ತ್ರೀ ಜೀವ ಜೀವನದ ಚುಂಬಕ ಶಕ್ತಿಯಾಗಿದ್ದಾಳೆ. ಅವಳ ಸೆಳೆತಗಳಿಗೆ ಒಳಗಾಗದವರೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಆಕೆಯ ಪ್ರಭಾವ ಲೋಕ, ಲೋಕಾಂತರಗಳಲ್ಲಿ ವ್ಯಾಪಿಸಿ ಮೂರು ಲೋಕಗಳ ಮಹನೀಯರನ್ನು ನರಳಿಸದೇ ಬಿಟ್ಟಿಲ್ಲ.

ಹರಿಯ ಉರವನು ಮೆಟ್ಟಿ । ಹರನ ಶಿರವನು ಏರಿ । ಸರಸಿಜೋದ್ಭವನ ಮೊಗಗೆಡಿಸಿ ಮೀರಿದಳು । ಹಿರಿಯರಿನ್ನಾರು ? ಸರ್ವಜ್ಞ ಹರಿ,ಹರ,ಬ್ರಹ್ಮಾದಿಗಳನ್ನು ಗೆದ್ದ ಸ್ತ್ರೀ ತನ್ನ ವಿಜಯದ ಸಂಕೇತವಾಗಿ ಅವರ ತಲೆ, ಎದೆ, ಮುಖಗಳಲ್ಲಿ ಸ್ಥಾನ ಪಡೆದಿದ್ದಾಳೆ. ಅಷ್ಟೇ ಅಲ್ಲದೆ ಪಾರ್ವತಿಯಾಗಿ ಶಿವನ ಅರ್ಧಾಂಗಿಯಾಗಿ ಮೆರೆದಿದ್ದಾಳೆ.

ಸರ್ವಜ್ಞ ಸ್ತ್ರೀ ಪರ ಸಂವೇಧನೆಯಲ್ಲಿ ಹೆಣ್ಣಿನ ಪರ ಮತ್ತು ವಿರೋಧ ಚಿಂತನೆಗಳಲ್ಲಿ ಸ್ತ್ರೀ ನೆಲೆಗಳನ್ನು ಇವೆರಡಕ್ಕಿಂತಲೂ ಭಿನ್ನವಾಗಿ ವಿಸ್ತರಿಸಿದ್ದಾನೆ.

ಚಿಲುಮೆಯಾ ಭೂಮಿಯೊಳು । ನಿಲುವುದೇ ನಿಲುಗಂಬ ? ।
ಒಲಿಯುವದು ನಿಲದೇ ಎಳೇದತ್ತ ಹೆಣ್ಣಿನ ।
ನೆಲೆಯ ನಾರ್ಬಲ್ಲ ! ಸರ್ವಜ್ಞ

ಜೌಗು ಅಂದರೆ ಸದಾ ನಿರೊರೆವ ಭೂಮಿ, ಇಂತಹ ನೆಲದಲ್ಲಿ ನಿಲುವುದೇ ನಿಲುಗಂಬ ಈ ದೃಷ್ಟಾಂತ ಹೆಣ್ಣೆಂಬ ಆಕರ್ಷಣೆ ಇರುವ ಕಡೆ ಒಲಿಯುವಂತೆ ಹೆಣ್ಣಿನ ಚಂಚಲತೆಯನ್ನು ಪ್ರತಿಧ್ವನಿಸುತ್ತದೆ. ಏರಿ ಮೇಲಣ ಪಂಜು । ನೀರೊಳಗೆ ಉರಿದಂತೆ । ನಾರಿಯ ರೊಲುಮೆ ತನಗೆಂಬ ಮರುಳಂಗೆ । ಮಾರಿ ಹಿಡಿದಿಹುದು ಸರ್ವಜ್ಞ ॥೧೭೬೧॥ ಕೆರೆಗು, ಕೆರೆಯ ದಂಡೆಗು ಇರುವ ಗಂಡು ಹೆಣ್ಣಿನ ಪರಸ್ಪರ ಅವಲಂಭನೆಯನ್ನು ದೈಹಿಕ ಸಂಭಂಧವನ್ನು ಸೊಗಸಾಗಿ ವ್ಯಂಜಿಸುತ್ತದೆ. ಕೆರೆದಂಡೆಯ ಮೇಲಿನ ಪಂಜು ಹೆಣ್ಣಿನ ಎದೆಯ ಒಲವು ಕಾಮನೆಗಳನ್ನು ಸಂಕೇತಿಸುತ್ತದೆ. ಹೆಣ್ಣು ಗಂಡಿನೊಡನೆ ಇಟ್ಟುಕೊಂಡಿರುವ ಸಂಬಂಧದ ಸ್ವರೂಪದ ಮೇಲೆ ಅರ್ಥಪೂರ್ಣ ಬೆಳಕು ಚೆಲ್ಲುತ್ತದೆ.

ಮನೆಯ ಮೇಲಿನ ಜೋಳ । ತೆನೆಯಾಗ ಬಲ್ಲುದೇ? ।
ವನಿತೆಯೆನ ಗೊಲಿದಳೆನಬೇಡ, ಬೆಳ್ಳಕ್ಕಿ ।
ದನವ ಕಾದಂತೆ ! ಸರ್ವಜ್ಞ

ಮನೆಯ ಮಾಳಿಗೆಯ ಮೇಲೆ ಒಣಗಲಿಕ್ಕೆ ಹಾಕಿದ ಜೋಳವು ಮೊಳೆತು ತೆನೆಯಾಗಬಲ್ಲುದೇ? ಎಂದಿಗೂ ಸಾಧ್ಯವಿಲ್ಲಾ. ಹೀಗಿದ್ದರೂ ಸ್ತ್ರೀಯು ತನ್ನನ್ನು ಮೆಚ್ಚಿರುವಳೆಂದು ಆಕೆಯ ಬೆನ್ನು ಹತ್ತಿ ಹೋಗುವವರು ಉಣ್ಣೆಗೊಸ್ಕರ ದನ ಬೆನ್ನುಹತ್ತಿ ಹೋಗುವ ಬೆಳ್ಳಕ್ಕಿಯಂತೆ ಪುರುಷ ಹೆಣ್ಣಿಗೆ ದಾಸನಾಗಿರುವನು. ಇವೆಲ್ಲ ಪ್ರತಿಮೆಗಳು ಗಂಡಿನ ನಂಬಿಕೆಗೆ ಧಕ್ಕುವ ವ್ಯರ್ಥತೆ–ದುರ್ವ್ಯವಸ್ಥೆಗಳನ್ನು ಸ್ಫುಟವಾಗಿ ಪ್ರತಿಫಲಿಸುತ್ತದೆ.

ಹೆಣ್ಣಿನ ಹೊನ್ನಿನ । ಮಣ್ಣಿನ ಬಲೆಯನ್ನು ।
ಹಣ್ಣಿಸಿ ಜಗವನದರೊಳು ಹಿಡಿದ ಮು ।
ಕ್ಕಣ್ಣನ ನೋಡ ! ಸರ್ವಜ್ಞ

ಲೆಕ್ಕಕ್ಕೆ ದುಕ್ಕಿಲ್ಲ । ಬೆಕ್ಕಿಗಂ ವ್ರತವಿಲ್ಲ ।
ಸಿಕ್ಕು ಬಂಧನದಿ ಸುಖವಿಲ್ಲ, ನಾರಿಗೆ ।
ಸಿಕ್ಕಿದವರಿಲ್ಲ ಸರ್ವಜ್ಞ

ಸರ್ವಜ್ಞನ ಗ್ರಹಿಕೆಗಳೆಲ್ಲಾ ಸತ್ಯಕ್ಕೆ ಹತ್ತಿರವಾಗಿವೆ. ಲೆಕ್ಕವಿರುವವನ ಕಡೆ ರೊಕ್ಕ ಯಾವಾಗಲು ಇರುವಂತೆ, ಬೆಕ್ಕಿಗೆ ವೃತವಿರುವುದಿಲ್ಲಾ, ಬದುಕೆಂಬ ಬಂದನದಲ್ಲಿ ಶಾಶ್ವತ ಸುಖವಿಲ್ಲಾ ಆದರೂ ಸ್ತ್ರೀ ಯನ್ನು ಬಿಟ್ಟು ಸಂಸಾರ ಬದುಕಿಲ್ಲ. ಆ ಸ್ತ್ರೀಗೆ ಒಲಿಯದವರಿಲ್ಲಾ ಹೀಗೆ ಸರ್ವಜ್ಞ ತನ್ನ ವಚನಗಳಲ್ಲಿ ಸ್ತ್ರೀ ಕುರಿತಾದ ಸತ್ಯಾತ್ಮಕ ನೋಟಗಳನ್ನು ತುಂಬಿಕೊಂಡಿರುವುದು ಸ್ಪಷ್ಟವೆನಿಸುತ್ತದೆ. ಹೆಣ್ಣಿನಿಂದಲೇ ಇಹಪರವು, ಹೆಣ್ಣಿನಿಂದಲೇ ಸಕಲ ಸಂಪದವು ಎಂಬಂತೆ ಹೆಣ್ಣಿನಿಂದಲೇ ಜಗತ್ತು ಹುಟ್ಟು ಪಡೆದಿದೆ. ಹಾಗಾಗಿ ಅವಳನ್ನು ನಿರಾಕರಿಸಿ ದೂರವಿರಿಸಲು ಸಾಧ್ಯವಿಲ್ಲಾ. ಈ ಬಗೆಯ ಲೋಕದರಿವನ್ನು ಅನುಭವವನ್ನು ಸರ್ವಜ್ಞ ಒಟ್ಟಾರೆಯಾಗಿ ತಿರಸ್ಕರಿಸಲು ಸಾಧ್ಯವೇ? ಸ್ತ್ರೀ ಪರವಾದ ಹಾಗೂ ವಿರೋಧವಾದ ನೆಲೆಗಳನ್ನು ಕಾಣುತ್ತೇವೆ. ಸರ್ವಜ್ಞ ಒಪ್ಪಿಕೊಳ್ಳುವ ಸ್ತ್ರೀ ಸಕಲಗುಣ ಸಂಪನ್ನೆಯಾಗಿರಬೇಕು, ವೇಳೆಯನ್ನರಿತು ನಡೆಯಬೇಕು, ಶಿರವೆತ್ತಿ ನೋಡದೇ, ಸರಿಬಂದ ಸ್ಥಾನದಲ್ಲಿ ಇರಬೇಕು, ಇಚ್ಛೇಯನ್ನರಿತು ನಡೆಯಬೇಕು ಹೀಗೆ ಸದ್ಗುಣ ಸ್ತ್ರೀಯ ಸ್ವರೂಪಗಳನ್ನು ವೈವಿಧ್ಯಮಯವಾಗಿ ಬಿಚ್ಚಿಡುತ್ತಾ ಹೋಗುತ್ತಾನೆ. ಸ್ತ್ರೀ ಗ್ರಹಿಕೆಯಲ್ಲಿ ಸರ್ವಜ್ಞನ ದೃಷ್ಟಿ ಅವಳ ಪರವಾದ ಗುಣಗಳಿಗಿಂತ, ವಿರೋಧವಾದ ಗುಣಗಳ ನೆಲೆಯನ್ನೇ ಹೆಚ್ಚು ಕಾಣುತ್ತೇವೆ.

**ಆಕರ ಗ್ರಂಥಗಳು :**

**೧.ಸರ್ವಜ್ಞನ ವಚನಗಳು :** ಸಂ.ಶ್ರೀ ಚನ್ನಪ್ಪ ಉತ್ತಂಗಿಯವರು. ಪ್ರಕಾಶ ಸಾಹಿತ್ಯ ನಂ–೨೭, ಅರಳಿಪೇಟೆ ಮುಖ್ಯ ರಸ್ತೆ, ಬೆಂಗಳೂರು. ೨೦೧೬
**೨.ಸರ್ವಜ್ಞನ ವಚನಗಳು :** ಸಂ. ಡಾ.ಎಲ್.ಬಸವರಾಜ. ಸಪ್ನ ಬುಕ್ ಹೌಸ್, ಗಾಂಧೀ ನಗರ. ಬೆಂಗಳೂರು. ೨೦೧೬
**೩.ಸರ್ವಜ್ಞ ಒಂದು ಅಧ್ಯಯನ :** ದೇ.ಜ.ಗೌ. ಪ್ರಕಾಶಕರು ಪ್ರಕಾಶನ ಮಂದಿರ ನಿಯಮಿತ, ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು.೧೯೭೪
**೪.ಸರ್ವಜ್ಞನ ತ್ರಿಪದಿಗಳು : ಅನುಸಂದಾನದ ನೆಲೆಗಳು.** ಸಂ. ಅಮರೇಶ.ನುಗಡೋಣಿ. ಪ್ರಸಾರರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೧೩
**೫.ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ಸತ್ವ :** ಡಾ.ಎಂ.ಅಕ್ಬರ್ ಅಲಿ. ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು. ೧೯೮೩